
# ತನ್ನ ಮುಕ್ತಿಯೂ ಜಗದ ಹಿತವೂ

'**ವಿವೇಕಪ್ರಭ**'ವೂ ಒಳಗೊಂಡಂತೆ ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದ ಲೇಖನಗಳ ಸಂಕಲನ ಇದು. ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದ, ಶ್ರೀಮಾತೆಯವರ ಬಗೆಗೆ ಬರೆದ ಲೇಖನಗಳಾದುದರಿಂದ, ಆ ಕಾಲದ ವಿಚಾರಗಳ ಪುನರವಲೋಕನ, ವಿಶ್ಲೇಷಣೆಗಳು ಪರಸ್ಪರ ಸಂಬಂಧ, ಸಮನ್ವಯಗಳೊಡನೆ ಒಂದು ಪರಿಧಿಯಲ್ಲಿ ಬಂದಂತಾಗಿದೆ. ಇಲ್ಲಿ ಸ್ವಾಮಿಜಿಯ ಬಗೆಗೆ ನಾಲ್ಕು, ಶ್ರೀರಾಮಕೃಷ್ಣರ ಬಗೆಗೆ ಆರು, ಶ್ರೀಮಾತೆಯವರ ಬಗೆಗೆ ಎರಡು ಲೇಖನಗಳು, ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಂಚಲನ, ಕುವೆಂಪು ಸಾಹಿತ್ಯದ ಬಗ್ಗೆ ಎರಡು ಲೇಖನಗಳು ಇವೆ. ಇಂಗ್ಲಿಷಿನ '**ಶ್ರೀರಾಮಕೃಷ್ಣ ವಚನವೇದ**'ಕ್ಕೆ ಆಲ್ಡಸ್ ಹಕ್ಸ್ಲೆ ಬರೆದ ಮುನ್ನುಡಿಯ ಅನುವಾದವೂ ಇಲ್ಲಿದೆ.

ಸ್ವಾಮಿ ವಿವೇಕಾನಂದರನ್ನು ತಿಳಿಯುವ ಅನೇಕ ರೀತಿಗಳು, ಬ್ರಾಂಡ್‌ಗಳು ಇವೆ. ಐವರು ಕುರುಡರು ಆನೆಯನ್ನು ಕಂಡ ಕತೆಯಂತೆ ಇವರೆಲ್ಲರೂ ತಾವು ತಿಳಿದಂತಹ ವಿವೇಕಾನಂದರೇ ಸತ್ಯವೆಂದು ಅವರನ್ನು ಸೀಮಿತಗೊಳಿಸುವರು. ಸಂದರ್ಭಗಳಿಂದ ಬೇರ್ಪಡಿಸಿದ ಅವರ ಹೇಳಿಕೆಗಳನ್ನು ಉಪಯೋಗಿಸಿ ತಮ್ಮ ವಿಚಾರಗಳ ಸಮರ್ಥನೆಗೆ ವಿವೇಕಾನಂದರನ್ನು ಬಳಸಿಕೊಳ್ಳುವವರ ನಡುವೆ ನಿಜವಾದ ವಿವೇಕಾನಂದರನ್ನು ಹುಡುಕಿ ತರುವ ಪ್ರಯತ್ನವನ್ನು ಲೇಖಕರು ಮಾಡಿದ್ದಾರೆ. ಪರಕೀಯರ ದಾಸ್ಯ ಹಾಗೂ ಗತಕಾಲೀನತೆಯಿಂದ ಬಿಡುಗಡೆಗೊಳ್ಳುವ ಸಂದರ್ಭದಲ್ಲಿ ಸಂಕುಚಿತತೆಯನ್ನು ಬದಿಗಿಟ್ಟು, ಮಾನವತೆಗೆ ತೆರೆದುಕೊಳ್ಳುವ ಮನೋಧರ್ಮವನ್ನು ಭಾರತಕ್ಕೆ ಶ್ರೀರಾಮಕೃಷ್ಣ-ವಿವೇಕಾನಂದರು ಹೇಗೆ ಒದಗಿಸಿದರು ಎಂಬುದನ್ನು ವಿವರಿಸಿದ್ದಾರೆ. ಸ್ವಾಮೀಜಿಯ ಪ್ರಕಾರ ಅರಿವನ್ನು ಇರವಿನ ಹೊರಗೆ ಇರಿಸಿದುದೇ ತಪ್ಪು. ಇದರಿಂದಲೇ ಯಂತ್ರಗಳು, ವಿಜ್ಞಾನ ಅಮಾನವೀಯವಾಗಿವೆ. ನೋವು ನಲಿವುಗಳು ಸಮಗ್ರ ಇರವಿನ ಮೀಮಾಂಸೆಯ ಭಾಗವಾಗಿದ್ದು, ಜೀವನಕ್ಕೆ ಬೇಕಾಗಿರುವುದು ಸಹಿಷ್ಣುತೆಯಲ್ಲ, ಕ್ರಿಯಾತ್ಮಕ ಸ್ವೀಕಾರ. ಸ್ವಾಮೀಜಿ ಅಧ್ಯಾತ್ಮ ಮಾನವತಾವಾದಿಯಾಗಿದ್ದು, ವಿಶ್ವಮಾನವನನ್ನು ಗುರಿಯಾಗಿರಿಸಿದ್ದರು. ಧರ್ಮ ಹೊರಗಿರದೆ, ಮಾನವನಲ್ಲಿನ ಸುಪ್ತ ದೈವಿಕತೆಯ ಅಭಿವ್ಯಕ್ತಿ ಎಂದು ತಿಳಿಸಿದರು. ವ್ಯಕ್ತಿಗತ ಮುಕ್ತಿಯೇ ಗುರಿಯಾಗಿದ್ದ ವೇದಾಂತದ ಗುರಿಯನ್ನು ಸ್ವಾಮೀಜಿ 'ಸ್ವತಃ ದೇವರಾಗಿ, ಇತರರು ದೇವರಾಗಲು ನೆರವಾಗಿ' ಎಂದು ಬದಲಿಸಿದರು. ಇಹ-ಪರ ಭೇದವನ್ನು ಅಳಿಸಿ, ಜಗತ್ತು ಹಾಗೂ ಮನುಷ್ಯ ದೇವರ ವ್ಯಕ್ತ ವಿರಾಟ್ ರೂಪ, ಇದಕ್ಕೇ ಪೂಜೆ ಸಲ್ಲಬೇಕು ಎಂದರು. ವ್ಯವಸ್ಥೆಯೊಳಗೆ ಸಿಕ್ಕಿಬಿದ್ದು ಕಳೆದು ಹೋದ ಮಾನವನಿಗೆ ಹೊಸ ಗುರುತನ್ನು ತಂದುಕೊಟ್ಟರು. ಸ್ವಾಮಿ ವಿವೇಕಾನಂದರ ಕವನಗಳೆಲ್ಲವನ್ನೂ ಕನ್ನಡಿಸಿರುವ ಲೇಖಕರು ಸ್ವಾಮೀಜಿಯವರ ಕಾವ್ಯಪ್ರತಿಭೆಯ ಬಗ್ಗೆ ಬರೆದ ಲೇಖನ ಸೊಗಸಾಗಿದೆ. ಕಲೆ ಆಸ್ವಾದಿಸುವ ಸಾಮರ್ಥ್ಯ ಇಲ್ಲದವನು ಧಾರ್ಮಿಕನಾಗಲಾರ ಎನ್ನುವ ಸ್ವಾಮೀಜಿಯವರಲ್ಲಿ ಕಾಣುವಿಕೆ (ದರ್ಶನ) ಹಾಗೂ ಕಟ್ಟುವಿಕೆ (ಭಾಷಾಕೌಶಲ) ಇರುವುದನ್ನು ಸರಿಯಾಗಿ ಗುರುತಿಸಿದ್ದಾರೆ.

ವ್ಯವಸ್ಥೆಯ ಆರಾಧನೆಯಿಂದ ಆಂತರ್ಯದ ಆಧ್ಯಾತ್ಮಿಕತೆಯ ವೈಯಕ್ತಿಕ ಶೋಧಕ್ಕೆ ಕರೆದೊಯ್ಯುವ ಶ್ರೀರಾಮಕೃಷ್ಣರ 'ಎನಿತು ಮತಗಳೋ ಅಷ್ಟು ಪಥಗಳು' ಎಂಬ ಮಾತು ತನ್ನನ್ನು ವಿಸ್ತರಿಸಿಕೊಳ್ಳುವ ಹಂಬಲದ್ದು ಎಂದು ಗುರುತಿಸುವ




*ಕೃತಿ* : **ತನ್ನ ಮುಕ್ತಿಯೂ ಜಗದ ಹಿತವೂ**
*ಲೇಖಕರು* : **ಡಾ. ಎಚ್.ಎಸ್.ಮುರಳೀಧರ**
*ಪ್ರಕಾಶಕರು* : **ಎಂ.ಸಿ. ನರೇಂದ್ರ,**
**ಮೆ। ಎಂ. ಮುನಿಸ್ವಾಮಿ ಅಂಡ್ ಸನ್ಸ್,**
**ಸರ್ವೋದಯ, ನಂ. 72, ಪ್ರೊ. ಎ.ಆರ್. ಕೃಷ್ಣಶಾಸ್ತ್ರಿ ರಸ್ತೆ, (ಸರ್ವೆಯರ್ ಸ್ಟ್ರೀಟ್), ಬಸವನಗುಡಿ, ಬೆಂಗಳೂರು - 560 004**
*ಪುಟಗಳು:* **108** *ಬೆಲೆ* : **75/**

ಲೇಖಕರು ಧರ್ಮಸಮನ್ವಯವೇ ಅವರ ಪರಿಧಿ ಎಂದು ಗುರುತಿಸುತ್ತಾರೆ. ಶ್ರೀ ಸಾಮಾನ್ಯನಾಗಿ ನಮಸ್ಕಾರಾಸ್ತ್ರದೊಡನೆ ಅಂದಿನ ಆಧುನಿಕ ಮುಂದಾಳುಗಳನ್ನು ಕಂಡು ಅವರು ತಮ್ಮ ವಿಚಾರಗಳನ್ನು ಒಪ್ಪುವಂತೆ ಅವರುಗಳನ್ನು ತಿದ್ದುತ್ತಾರೆ. ಇದನ್ನು ಲೇಖಕರು ಮಾನವೀಯವಾಗುವುದೆಂದರೆ ಸಾಮಾನ್ಯತಾ ಸ್ವರೂಪವನ್ನು ಧರಿಸಿರುವುದು ಎಂದು ಬಣ್ಣಿಸುತ್ತಾರೆ. ವ್ಯಕ್ತ-ಅವ್ಯಕ್ತಗಳ ನಡುವಿನ ಸೇತುವೆ ಗುರುತತ್ತ್ವ; ಪ್ರತಿಯೊಬ್ಬನಿಗೂ ಅವನದೇ ಆದ ಭಾಷೆಯಲ್ಲಿ ಧರ್ಮವನ್ನು ಬೋಧಿಸಬೇಕು ಎಂದು ಶ್ರೀರಾಮಕೃಷ್ಣರು ಗುರುತಿಸಿ, ವೈವಿಧ್ಯಮಯ ಸಾಧನಾ

ವಿಧಾನಗಳನ್ನು ತಾವೂ ಅನುಸರಿಸಿ ಇತರರೂ ಅನುಸರಿಸುವಂತೆ ಮಾಡಿದರು. ಅವರಲ್ಲಿ ಸತ್ಯವ್ರತವೆನ್ನುವುದು ವಾಚಿಕವಾಗಿರದೆ ಅಸ್ತಿತ್ವ ಸಮಸ್ತವನ್ನೂ ಒಳಗೊಂಡಿತ್ತು ಎನ್ನುವ ಲೇಖಕರು ಅನೇಕ ಸಂದರ್ಭಗಳನ್ನು ಉದಾಹರಿಸುತ್ತಾರೆ. ಹರಿದಾಸ ಸಾಹಿತ್ಯದ ವಿಶೇಷ ಅಧ್ಯಯನ ಮಾಡಿರುವ ಅವರು ಶ್ರೀರಾಮಕೃಷ್ಣರ ಹಾಗೂ ಕನ್ನಡದ ಹರಿದಾಸರ ದಾಸ್ಯಭಾವಕ್ಕೆ ಒತ್ತು ನೀಡುವ, ಭಗವನ್ನಾಮಕ್ಕೆ ಮಹತ್ವ ನೀಡುವ ಮನೋಧರ್ಮ ಹಾಗೂ ಅಭಿವ್ಯಕ್ತಿಯ ರೀತಿ ಒಂದೇ ಎಂದು ಗುರುತಿಸುತ್ತಾರೆ. ಶ್ರೀರಾಮಕೃಷ್ಣರ ದೈನಂದಿನ ಜೀವನ, ಸಂಭಾಷಣೆಗಳನ್ನು ಯಥಾವತ್ತಾಗಿ ದಾಖಲಿಸಿದ 'ಮ' ಅವರ ಮಹತ್ವವನ್ನು ಬಿಂಬಿಸುವ ಆಲ್ಡಸ್ ಹಕ್ಸ್ಲೆ ಅವರ ಲೇಖನದ ಅನುವಾದ ಸೊಗಸಾಗಿದೆ.

ಶ್ರೀಮಾತೆ ಶಾರದಾದೇವಿಯವರ ಎಲ್ಲವನ್ನೂ ತನ್ನದೆನ್ನುವ ಅಸ್ತಿತ್ವ ಸಹಜತೆಯನ್ನು ಅರಳಿಸಬಲ್ಲುದು. ಪರಕೀಯತೆ ಇಲ್ಲದಿರುವ ಆದರ್ಶ ಅವರದು. ಅವರ ದರ್ಶನದ ಹಿಂದೆ ಹೆಣ್ಣಿನ ಕಣ್ಣು ಇದೆ. ಸ್ಥಳೀಯತೆ ಹಾಗೂ ವಿಶ್ವಾತ್ಮಕತೆಯ ನಡುವಿನ ಸಂಬಂಧದಂತೆ ಅವರಿದ್ದರು. ಶ್ರೀರಾಮಕೃಷ್ಣರ ವಿವಿಧ ಧರ್ಮಗಳ ಸಾಧನೆಯನ್ನು ಮಾಡಿರುವುದರ ಹಿಂದೆ ತನ್ನ ಸಂತಾನದ ಬಹುಮುಖತೆಯನ್ನು ಮಾನ್ಯ ಮಾಡುವ ಮಾತೃತ್ವದ ದೃಷ್ಟಿ ಇದೆ ಎಂದು ಲೇಖಕರು ಹೇಳುತ್ತಾರೆ. ಶ್ರೀಮಾತೆ ಲೋಕದ ರಚನೆಯಲ್ಲಿ ದೇವರನ್ನು ಸ್ಪರ್ಶಿಸಿದವರು; ಪರಮಹಂಸರು ದೇವರ ರಚನೆಯಲ್ಲಿ ಲೋಕವನ್ನು ಸ್ಪರ್ಶಿಸಿದವರು. ಈ ಎರಡು ಸ್ಪರ್ಶಗಳ ಸಂಗಮ ಬಿಂದು ಎಲ್ಲ ಸಿದ್ಧಿಯೂ ತನ್ನ ಶಿಖರದಲ್ಲಿ ಸ್ವರೂಪತಃ ಸ್ತ್ರೀತತ್ತ್ವವೆಂಬ ಸಂದೇಶವನ್ನು ನೀಡುವಂತೆ ಪರಮಹಂಸರು ಶ್ರೀಮಾತೆಯವರನ್ನು ಪೂಜಿಸಿದ ಸಂದರ್ಭ ಎಂದು ಲೇಖಕರು ಕವಿಯಾಗಿ ವರ್ಣಿಸಿದ್ದಾರೆ.

ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿರುವ ಶ್ರೀ ಮುರಳೀಧರ ಅವರು ತಮ್ಮ ಸಮೀಕ್ಷಾ ಲೇಖನದಲ್ಲಿ ಚಾರಿತ್ರಿಕವಾಗಿ ಮೊದಲ ಲೇಖಕರನ್ನು ನೆನೆದಿದ್ದಾರೆ. ತಾತಯ್ಯ ಶ್ರೀ ವೆಂಕಟಕೃಷ್ಣಯ್ಯನವರು ಸಂಪಾದಕರಾಗಿ ೧೯೦೮ರಲ್ಲಿ **'ವಿವೇಕಾನಂದ'** ಎಂಬ ಪತ್ರಿಕೆಯನ್ನು ಹೊರತಂದು ನಡೆಸಿದುದು, ೧೯೦೯ರಲ್ಲಿ ಡಿ.ವಿ.ಜಿ. ವಿವೇಕಾನಂದರ ಆದರ್ಶ, ಅಭೇದಾನಂದರ ದೀಕ್ಷೆ ಬಗ್ಗೆ ಸ್ವಾಗತ ಗೀತೆ ಬರೆದುದು, ೧೯೧೧ರಲ್ಲಿ ನಂಗಪುರಂ ವೆಂಕಟೇಶ ಅಯ್ಯಂಗಾರ್ಯರ **'ಶ್ರೀರಾಮಕೃಷ್ಣ ಪರಮಹಂಸರ ಉಪದೇಶ ವಾಕ್ಯಾವಳಿ'** ಹಾಗೂ ಎ.ಆರ್.ಕೃಷ್ಣಶಾಸ್ತ್ರೀ ಮತ್ತು ಟಿ.ಎಸ್. ವೆಂಕಣ್ಣಯ್ಯನವರ **'ಶ್ರೀರಾಮಕೃಷ್ಣ ಪರಮಹಂಸರ ಚರಿತ್ರೆ'** ಪುಸ್ತಕಗಳು ಪ್ರಕಟವಾದುದು - ಈ ಮೊದಲುಗಳನ್ನು ಕುರಿತು ಮೌಲ್ಯಮಾಪನ ಮಾಡಿದ್ದಾರೆ. ಕುವೆಂಪು ಅವರ ದಾರ್ಶನಿಕತೆಯು ಶ್ರೀರಾಮಕೃಷ್ಣ ವಿವೇಕಾನಂದರ ಉಪದೇಶಗಳಿಂದ ಪ್ರೇರಣೆ ಪಡೆದುದನ್ನೂ, ಅವರು ಬರೆದ ಶ್ರೀರಾಮಕೃಷ್ಣ - ವಿವೇಕಾನಂದರ ಜೀವನ ಚರಿತ್ರೆಗಳನ್ನೂ, ಖಂಡಕಾವ್ಯವನ್ನೂ ಪರಿಚಯಿಸಿ **'ಶ್ರೀ ರಾಮಾಯಣ ದರ್ಶನಂ'** ಮಹಾಕಾವ್ಯ ಹಾಗೂ ಕವಿತೆಗಳಲ್ಲಿ ಶ್ರೀರಾಮಕೃಷ್ಣರೇ ಗುರಿಯಾಗಿರುವುದನ್ನು ತೋರಿಸಿದ್ದಾರೆ. ಸ್ವತಃ ಕುವೆಂಪು ತಮ್ಮನ್ನು ಶ್ರೀರಾಮಕೃಷ್ಣ ಗೋತ್ರೋದ್ಭವನೆಂದು ಕರೆದುಕೊಂಡಿರುವುದನ್ನು, ಅವರ ಕಾವ್ಯದೃಷ್ಟಿಯ ಮೂಲ ಸೆಲೆ ಶ್ರೀರಾಮಕೃಷ್ಣರಾಗಿರುವುದನ್ನು ಗುರುತಿಸಿದ್ದಾರೆ. ಒಟ್ಟಿನಲ್ಲಿ ಈ ಪುಸ್ತಕ ಶ್ರೀರಾಮಕೃಷ್ಣ ವಿವೇಕಾನಂದ ಸಾಹಿತ್ಯಕ್ಕೆ ಒಳ್ಳೆಯ ಸೇರ್ಪಡೆ.

*— ಡಾ. ಹೆಚ್. ಪಾಂಡುರಂಗ ವಿಠಲ*

## ಸತ್ಯ ಮೊದಲಿಗೆ ಕಹಿ; ಕೊನೆಯಲ್ಲಿ ಸಿಹಿ

''ಇದನ್ನು ಕುಡಿ'' ಎಂದ ಗುರು. ಅಪೂರ್ವ ಗಿಡಮೂಲಿಕೆಗಳಿಂದ ತಯಾರಿಸಿದ ಕಷಾಯವನ್ನು ಅವನು ಶಿಷ್ಯನಿಗೆ ಕೊಟ್ಟ. ಶಿಷ್ಯ ಅದನ್ನು ಕುಡಿದು, ''ತುಂಬಾ ಕಹಿ. ಒಂದು ಗುಟುಕೂ ಕುಡಿಯಲಾಗುತ್ತಿಲ್ಲ'' ಎಂದ. ಇನ್ನೊಬ್ಬ ಶಿಷ್ಯನೂ ಪ್ರಯತ್ನಿಸಿದ. ''ಇದಕ್ಕಿಂತ ಕಹಿ ಇನ್ನಾವುದೂ ಇರಲಾರದು'' ಎಂದನಾತ. ಮೂರನೇ ಶಿಷ್ಯ ಕುಡಿದ ನಂತರ ಹೇಳಿದ, ''ಅದ್ಭುತವಾಗಿದೆ.. ಏನೇ ಆಗಲಿ, ಗುರುಗಳು ಕೊಟ್ಟ ಪ್ರಸಾದ ತಾನೆ! ಇದನ್ನು ಕುಡಿದರೆ ಒಳ್ಳೆಯದೇ ಆದೀತು.''

''ಹೌದು ಮಗೂ, ಅದರಲ್ಲಿ ತುಂಬಾ ಅಪರೂಪದ ಔಷಧೀಯ ಗುಣವಿದೆ. ಆದರೆ ಅದಕ್ಕಿಂತ ಹೆಚ್ಚಿನದಾಗಿ, ಇನ್ನೊಂದು ಅಂಶವಿದೆ. ಇದನ್ನು ಕುಡಿಯಲು ಕೊಟ್ಟದ್ದೇಕೆಂದರೆ, ನಿನ್ನ ತಾಳ್ಮೆ, ವಿನಯಗಳನ್ನು ಪರೀಕ್ಷೆ ಮಾಡಲು. ಅಷ್ಟೇ ಅಲ್ಲ, ಬೇರೊಂದು ಅರ್ಥವೂ ಇದರಲ್ಲಿದೆ. ಸತ್ಯ ಹಾಗೂ ಜ್ಞಾನ ಮೊದಲು ಕಹಿಯಾಗಿರುತ್ತದೆ, ಕೊನೆಗೆ ಸಿಹಿಯಾಗಿರುತ್ತದೆ ಎಂಬುದನ್ನು ನಿಮಗೆ ತಿಳಿಸಿಕೊಡಬೇಕಿತ್ತು.''

ಶಿಷ್ಯಂದಿರು ತುಂಬ ಗಮನಕೊಟ್ಟು ಅವರ ಮಾತನ್ನು ಕೇಳಿಸಿಕೊಂಡರು. ಗುರುಗಳ ಆಶ್ರಮದಲ್ಲಿ ಅದು ಅವರ ಮೊದಲನೆಯ ದಿವಸ. ಸತ್ಯವನ್ನು ಕುರಿತು ಮೊದಲ ಪಾಠವನ್ನು ಅವರು ಶಿಷ್ಯಂದಿರಿಗೆ ಕಲಿಸಿದ್ದರು.

*('In Communion with Consciousness' ಗ್ರಂಥದಿಂದ)*